ನೆನಪಿಟ್ಟುಕೋ ಗೆಳತೀ
ನಿನ್ನ ನೆನಹುಗಳನ್ನೆಲ್ಲಾ ಅವರ ಅಂಗೈಗಿಟ್ಟು ಬಂದಿರುವೆ
ನಿನಗೆ ಗೊತ್ತು
ನಿರುತ್ತರಗಳಿಗೆ ಹಂಬಲಿಸುವವನು ನಾನೆಂದು

ಮುಂದೆ ಸಮುದ್ರವಿದೆ
ತಟೆಗೆ ಅಪ್ಪಳಿಸುವ ತೆರೆಗಳಿವೆ
ಮೇಲೆ ಚಂದ್ರನಿದ್ದ
ಈಗ ಅವನೂ ಇಲ್ಲ
ಕೊರೆಯುವ ಚಳಿಯಿದೆ
ಆದರೊಟ್ಟಿಗೆ ನಿನ್ನ ನೆನಪುಗಳು
ಕೈಲೊಂದು ಸಿಗರೇಟು ಡಬ್ಬ
ಜೇಬಿನಲ್ಲೊಂದು ರೆಡ್ಡು ರೆಡ್ಡು ವೈನು
ಮತ್ತು
ಅತಂತ್ರ ನಿರ್ಧಾರ

ಬದುಕಬೇಕಿದೆ ನಾನಿನ್ನು
'ಹೇಗಾದರೂ ಬದುಕಿಕೋ ಹೋಗು'
ಆಕಾಶದಿಂದ ಯಾರೋ ಕೂಗುತ್ತಿರುವ ಸದ್ದು

ನೀನು ನನಗೆ ಕಲಿಸಿದ್ದಾದರೂ ಏನು?
ಹೇಗಾದರೂ ಬದುಕಿಬಿಡಬಲ್ಲೆ

ಎತ್ತರ ಚಾಚಿಕೊಂಡಿರುವ ಬೆಟ್ಟಗಳೆಷ್ಟು ಚಂದ ಕಾಣುತ್ತಿವೆಯಲ್ಲ
ಇಂದು

ಈ ಕೊರೆವ ಶಿಶಿರಕ್ಕೆ
ಸ್ವಚ್ಛದಾದ್ದೊಂದು ಖಾಲಿತನ
ಕೈಲೊಂದು ಸಿಗರೇಟು ಡಬ್ಬ
ಜೇಬಿನಲ್ಲೊಂದು ರೆಡ್ಡು ರೆಡ್ಡು ವೈನು
ಮತ್ತು
ಅತಂತ್ರ ನಿರ್ಧಾರ

ಇನ್ನೇನು ಬೇಕು ಹೇಳು ಈ ಬದುಕಿಗೆ?
ನಿನ್ನ ನೆನಹುಗಳ ಹೊರತು

